ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	368
ಸದಸ್ಯರ ಹೆಸರು	ಡಾ॥ ವೈ ಎ ನಾರಾಯಣಸ್ವಾಮಿ
ಉತ್ತರಿಸುವ ದಿನಾಂಕ	15-09-2021
ಉತ್ತರಿಸುವವರು	ಮಾನ್ಯ ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮುಜರಾಯಿ ಇಲಾಖೆಯಲ್ಲಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು; ಅವುಗಳ ಪಟ್ಟಿ ನೀಡುವುದು ಹಾಗೂ ಕಳೆದ ಮೂರು ವರ್ಷಗಳಲ್ಲಿನ ವಾರ್ಷಿಕ ಆದಾಯದ ಮೊತ್ತದ ವಿವರಗಳನ್ನು ನೀಡುವುದು;</td><td>
ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 34,563 ದೇವಾಲಯಗಳಿರುತ್ತವೆ. ದೇವಾಲಯಗಳ ಜಿಲ್ಲಾವಾರು ಪಟ್ಟಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ. ಪ್ರವರ್ಗವಾರು ಈ ಕೆಳಕಂಡಂತಿದೆ.
<table>
<tr><th>ಪ್ರವರ್ಗ</th><th>ಸಂಖ್ಯೆ</th></tr>
<tr><td>'ಎ'</td><td>205</td></tr>
<tr><td>'ಬಿ'</td><td>139</td></tr>
<tr><td>'ಸಿ'</td><td>34219</td></tr>
<tr><td>ಒಟ್ಟು</td><td>34563</td></tr>
</table>
ಮೇಲ್ಕಂಡ ಪ್ರವರ್ಗ 'ಸಿ' ಶ್ರೇಣಿಯ ದೇವಾಲಯಗಳಲ್ಲಿ ವಾರ್ಷಿಕ ಆದಾಯವಿರುವುದಿಲ್ಲ.
ಕಳೆದ ಮೂರು ವರ್ಷಗಳಿಂದ ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳಿಂದ ಬಂದ ಆದಾಯದ ವಿವರವನ್ನು ಅನುಬಂಧ-2ರಲ್ಲಿ ಒದಗಿಸಿದೆ.
</td></tr>
<tr><td>ಆ)</td><td>ಮುಜರಾಯಿ ಇಲಾಖೆಯಲ್ಲಿ ಕಳೆದ 05 ವರ್ಷಗಳಲ್ಲಿ ದೇವಸ್ಥಾನಗಳ ಅಭಿವೃದ್ಧಿಗೆ ಬಿಡುಗಡೆ ಮಾಡಲಾಗಿರುವ ಹಣದ ಮೊತ್ತ ಎಷ್ಟು; (ಜಿಲ್ಲಾವಾರು/ ತಾಲ್ಲೂಕುವಾರು ವಿವರವನ್ನು ನೀಡುವುದು)</td><td>
ಧಾರ್ಮಿಕ ದತ್ತಿ ಇಲಾಖೆಯಲ್ಲಿ ಕಳೆದ 05 ವರ್ಷಗಳಲ್ಲಿ ದೇವಸ್ಥಾನಗಳ ಅಭಿವೃದ್ಧಿಗಾಗಿ ಒಟ್ಟು ರೂ.60290.85ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ. ಯೋಜನವಾರು ವಿವರ ಈ ಕೆಳಕಂಡಂತಿದೆ.
ರೂ.ಲಕ್ಷಗಳಲ್ಲಿ
<table>
<tr><th>ಯೋಜನೆ ವಿವರ</th><th>2016-17</th><th>2017-18</th><th>2018-19</th><th>2019-20</th><th>2020-21</th><th>ಒಟ್ಟು</th></tr>
<tr><td>ದುರಸ್ತಿ ಜೀರ್ಣೋದ್ಧಾರ/ ಅಭಿವೃದ್ಧಿ</td><td>6549.51</td><td>8291.90</td><td>4629.57</td><td>10166.40</td><td>19177.50</td><td>48814.88</td></tr>
<tr><td>ಆರಾಧನಾಯೋಜನೆ</td><td>156.80</td><td>199.99</td><td>949.760</td><td>949.760</td><td>739.20</td><td>2995.51</td></tr>
<tr><td>ಪರಿಶಿಷ್ಟಜಾತಿ ಉಪ ಯೋಜನೆ</td><td>1915.20</td><td>1998.08</td><td>757.12</td><td>1514.24</td><td>1182.72</td><td>7367.36</td></tr>
<tr><td>ಗಿರಿಜನಉಪಯೋಜನೆ</td><td>180.99</td><td>299.99</td><td>227.58</td><td>227.58</td><td>176.96</td><td>1113.1</td></tr>
<tr><td>ಒಟ್ಟು</td><td>8802.50</td><td>10789.96</td><td>6564.03</td><td>12857.98</td><td>21276.38</td><td>60290.85</td></tr>
</table>
ದುರಸ್ತಿ /ಜೀರ್ಣೋದ್ಧಾರ/ ಅಭಿವೃದ್ಧಿ ಯೋಜನೆಯಡಿ ಅನುದಾನ ಕೋರಿ ಸ್ವೀಕೃತವಾಗುವ ಪ್ರಸ್ತಾವನೆಗಳನ್ವಯ ಜಿಲ್ಲಾವಾರು ಅನುದಾನ ಬಿಡುಗಡೆ ಮಾಡುತ್ತಿದ್ದು, ಜಿಲ್ಲಾವಾರು/ ವರ್ಷವಾರು ವಿವರವನ್ನು ಅನುಬಂಧ-3ರಲ್ಲಿ ಒದಗಿಸಿದೆ.
</td></tr>
</table>

		ಆರಾಧನಾ ಯೋಜನೆ/ ಪರಿಶಿಷ್ಟಜಾತಿ ಉಪ ಯೋಜನೆ/ ಗಿರಿಜವ ಉಪ ಯೋಜನೆಯಡಿ ವಿಧಾನಸಭಾ ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡುತ್ತಿದ್ದು, ಜಿಲ್ಲಾವಾರು/ ವರ್ಷವಾರು ವಿವರವನ್ನು **ಅನುಬಂಧ-4** ರಲ್ಲಿ ಒದಗಿಸಿದೆ. (ಅನುಬಂಧ-1 ರಿಂದ 4 ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು)
ಇ)	ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿರುವ ಅತಿಹೆಚ್ಚಿನ ಆದಾಯ ಬರುವಂತಹ ದೇವಸ್ಥಾನಗಳ ಆರ್ಥಿಕ ಸಂಪನ್ಮೂಲ ಬಳಸಿಕೊಂಡು ಬೇರೆಬೇರೆ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು?	ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ಅತಿ ಹೆಚ್ಚಿನ ಆದಾಯ ಬರುವಂತಹ ದೇವಸ್ಥಾನಗಳ ಆರ್ಥಿಕ ಸಂಪನ್ಮೂಲ ಬಳಸಿಕೊಂಡು ಬೇರೆ ಬೇರೆ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಲು ಸರ್ಕಾರಕ್ಕೆ ತೊಂದರೆ ಇರುವುದಿಲ್ಲ. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ -1997ರ ಸೆಕ್ಷನ್ 21 ಎಫ್ ರನ್ವಯವಾರ್ಷಿಕ ರೂ.2.00ಲಕ್ಷ ರೂಪಾಯಿಗಿಂತ ಕಡಿಮೆ ಆದಾಯವಿರುವ ಸಮೂಹ 'ಸಿ' ಮುಜರಾಯಿ ಅಧಿಸೂಚಿತ ಸಂಸ್ಥೆಗಳನ್ನು ಮಾತ್ರ ಹೆಚ್ಚು ಆದಾಯವಿರುವ ಸಮೂಹ'ಎ' ಅಧಿಸೂಚಿತ ಸಂಸ್ಥೆಗಳ ವತಿಯಿಂದ ದತ್ತು ತೆಗೆದುಕೊಳ್ಳಲು ಅವಕಾಶವಿರುತ್ತದೆ.

ಸಂಖ್ಯೆ: ಕಂಇ 163 ಮುಸಪ್ರ 2021

(ಶಶಿಕಲಾ. ಅ. ಜೊಲ್ಲೆ)
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು